**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.**

**ಸಿ.ಸಿ. ನಂಬರ. 235/2026.**

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೊಲೀಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತ : ಸಹದೇವ ತಂದೆ ದುರ್ಗಪ್ಪ ಬಾಂದುರ್ಗಿ,
ವೃತ್ತಿ : ರೈತಾಬಿ, ಸಾ : ತಟ್ಟಿಗೇರಾ, ತಾಃ ಹಳಿಯಾಳ,
ಜಿಲ್ಲೆ : ಉತ್ತರ ಕನ್ನಡ.

ಆಪಾದನೆ

ಆರೋಪಿಯಾದ ನೀವು ದಿನಾಂಕ 30-01-2025 ರಂದು ಬೆಳಗ್ಗೆ 11-00 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲೂಕಿನ ತಟ್ಟಿಗೇರಾ ಗ್ರಾಮದ ಶಿವಾಜಿ ಗಲ್ಲಿಯಲ್ಲಿರುವ ಗೂಡಂಗಡಿ ಕಟ್ಟೆಯ ಮೇಲೆ ಸಾರ್ವಜನಿಕ ಜಾಗದಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯದೇ ಯಾರೋ ಅಪರಿಚಿತರು ತಾವು ಹೊರಗಡೆಯಿಂದ ತಂದಿದ್ದ 90 ಎಮ್ ಎಲ್ ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ಎಂಬ ಲೇಬಲ್ ಇರುವ ಮಧ್ಯ ತುಂಬಿದ 4 ಪೌಚಗಳು, 90 ಎಮ್ ಎಲ್ ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ಎಂಬ ಖಾಲಿ ಇರುವ 4 ಪೌಚಗಳು, ಎರಡು ಪಾಸ್ಟಿಕ್ ಗ್ಲಾಸ್, ಒಂದು ಲೀಟರ್ ನೀರಿನ ಬಾಟಲಿಗಳೊಂದಿಗೆ ಕೊಟ್ಟ ಮುಕ್ತವಾಗಿ ಮಧ್ಯಸೇವನೆ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 15ಎ ಸಹವಾಚಕ ಕಲಂ 32(3) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಪ್ರಶ್ನೆ 1 : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿದುಕೊಂಡಿದ್ದೇನೆ.

ಪ್ರಶ್ನೆ 2 : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ : ಒಪ್ಪಿಕೊಳ್ಳುತ್ತೇನೆ.

(ಆರೋಪಿತನಿಗೆ ಆಪಾದನೆಯ ಸಾರಾಂಶವನ್ನು ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಕೇಳಿ, ಆತನು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು ).

ಸ್ಥಳ : ಹಳಿಯಾಳ.
ದಿನಾಂಕ : 18-05-2026. ಪ್ರ.ದ.ನ್ಯಾದಂ., ಹಳಿಯಾಳ.